SE – 294

Swamy Vivekananda Rural First Grade College
LIBRARY
Acc. No.
Date
Neralur, Anekal Taluk
Bangalore

**ಎರಡನೇ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ, ಜೂನ್/ಜುಲೈ 2026**
**(SEP 2025-26) (Freshers)**
**ಕನ್ನಡ ಭಾಷಾ ಪತ್ಯ – 2**
**ವಾಣಿಜ್ಯ ಕನ್ನಡ – 2**

Time : 3 Hours — Max. Marks : 80

I. ಆರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**40** ಪದಗಳಿಗೆ ಮೀರದಂತೆ). **(6×2=12)**

1) ಶಕುಂತಲೆಯ ಸೌಂದರ್ಯ ಎಂತಹದ್ದು ?

2) ವಿಶ್ವದ ಯಾವ ಕ್ರಾಂತಿಗಳಿಗೆ ಕಿಶೋರರ ಸಿಂಹಪಾಲು ಇದೆ ?

3) 'ಕುಸಲದ ನಗುವ ನಗತ್ಯೆತಿ' ಮಾತಿನ ತಾತ್ಪರ್ಯವೇನು ?

4) 'ಶವನ್ನಾರಿಪು' ಎಂದರೇನು ?

5) ಗಾಂಧಿ ಸ್ಮರಣೆ ಕವಿತೆಯಲ್ಲಿ ಬರುವ ಶಾಲಾಮಕ್ಕಳ ಸ್ಥಿತಿಗತಿಯ ಬಗ್ಗೆ ಕವಿಯ ಅಭಿಪ್ರಾಯವೇನು ?

6) ದೇವರ ಮೌನ ಮತ್ತು ಚಪ್ಪಲಿಯ ಕಳ್ಳತನದ ಬಗ್ಗೆ ಕವಿಯ ಅಭಿಪ್ರಾಯವೇನು ?

7) ತುಕ್ರ ಭಂಡಾರಿ ಪಾತ್ರ ಕುರಿತು ಬರೆಯಿರಿ.

8) ಸಮಾಜದಲ್ಲಿದ್ದ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ನಾಲ್ವಡಿಯವರು ಜಾರಿಗೆ ತಂದ ನಿಷೇಧ ಕಾಯ್ದೆಗಳು ಯಾವುವು ?

II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**80** ಪದಗಳಿಗೆ ಮೀರದಂತೆ). **(4×5=20)**

1) ಶಕುಂತಲೆಯು 'ನನಗೆ ಈ ಉಂಗುರದಲ್ಲಿ ನೆಚ್ಚಿಗೆಯಿಲ್ಲ' ಎನ್ನಲು ಕಾರಣವೇನು ?

2) ಕಿಶೋರರ ಉಡುಗೆ ತೊಡುಗೆ ಮತ್ತು ಕೇಶ ವಿನ್ಯಾಸದ ಬಗ್ಗೆ ಬರೆಯಿರಿ.

3) 'ಗರತಿ ಗಂಗಮ್ಮನ ಉಡಿಯೊಳಗ ಒಳ್ಳೊಳೆ ಮೀನಾ ಗರಿ ತೆಗೆದು ಅಡ್ಯಾವ' ಇಲ್ಲಿರುವ ಪ್ರಕೃತಿ ಚಿತ್ರಣದ ಸಂದರ್ಭವನ್ನು ತಿಳಿಸಿ.

4) ಗ್ರಾಮೀಣರಲ್ಲಿರುವ ಪರಂಪರಾಗತ ಜ್ಞಾನವು ಸಸ್ಯ ವಿಜ್ಞಾನಿಗಳ ಮೂಲಕ ಉಳಿಯಬೇಕಾದ ಸಂದರ್ಭವನ್ನು ತಿಳಿಸಿ.

5) ಹಕ್ಕಿಗಳ ಕೂಗಿನಿಂದ ಉಂಟಾಗುವ ಭಯದ ನಿವಾರಣೆಗೆ ಇರುವ ಉಪಾಯವೇನು ?

6) ಪ್ರಾರ್ಥನೆ ಕವಿತೆಯಲ್ಲಿ ಕವಯಿತ್ರಿ ತಮ್ಮ ದೇಶಪ್ರೇಮವನ್ನು ಹೇಗೆ ಅಭಿವ್ಯಕ್ತಪಡಿಸಿದ್ದಾರೆ ?

III. ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**160** ಪದಗಳಿಗೆ ಮೀರದಂತೆ). (3×10=30)

1) ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣದ ಅಗತ್ಯತೆಯನ್ನು 'ಹದಿಹರೆಯಕ್ಕಿರಲಿ ಹೃದಯ ಸಂವಾದ' ಪಾಠದ ಹಿನ್ನಲೆಯಲ್ಲಿ ಚರ್ಚಿಸಿ.

2) ಬಾಳೆಹೊನ್ನೂರು ಹಾಗೂ ಹೊರನಾಡು ಹೆಸರುಗಳು ಅನ್ವರ್ಥ ಹೇಗೆ ವಿವರಿಸಿ.

3) ಮಹಾತ್ಮ ಗಾಂಧಿಯವರ ಮೌಲ್ಯಗಳು ಮತ್ತು ಪ್ರಸ್ತುತ ರಾಜಕೀಯ ಸನ್ನಿವೇಶದ ನಡುವಿನ ವೈರುಧ್ಯವನ್ನು 'ಗಾಂಧಿ ಸ್ಮರಣೆ' ಕವಿತೆಯು ಹೇಗೆ ಕಟ್ಟಿಕೊಟ್ಟಿದೆ ? ವಿವರಿಸಿ.

4) 'ಮೈ ಮೇಲೆ ಬರುವ ದೇವರು' ಗದ್ಯದಲ್ಲಿ ವ್ಯಕ್ತವಾಗಿರುವ ಹಾಸ್ಯ ಮತ್ತು ವಿಡಂಬನೆಯನ್ನು ಸೋದಾಹರಣವಾಗಿ ವಿವರಿಸಿ.

5) ''ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯು ಮೈಸೂರಿನ ಸುವರ್ಣ ಯುಗವಾಗಿತ್ತು'' – ಈ ಹೇಳಿಕೆಯನ್ನು ಲೇಖನದ ಹಿನ್ನೆಲೆಯಲ್ಲಿ ಸಮರ್ಥಿಸಿ.

IV. ವ್ಯಾಸಂಗ ಪ್ರಮಾಣ ಪತ್ರ ಕೋರಿ ನಿಮ್ಮ ಪ್ರಾಂಶುಪಾಲರಿಗೊಂದು ಅರ್ಜಿ ಬರೆಯಿರಿ. (1×5=5)

V. ನಿಮ್ಮ ಕಾಲೇಜಿನ ಸ್ವಾತಂತ್ರ್ಯ ದಿನಾಚರಣೆಯ ಕುರಿತು ವರದಿಯನ್ನು ರಚಿಸಿ. (1×5=5)

VI. ಕೆಳಗೆ ಕೊಟ್ಟಿರುವ ಕಂಡಿಕೆಯನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ, ಸೂಕ್ತ ಶೀರ್ಷಿಕೆ ಕೊಡಿ. (1×4=4)

'ಹಣ, ಪುಸ್ತಕ, ಹೆಂಡತಿ – ಈ ಮೂರು ವಸ್ತುಗಳು ಒಮ್ಮೆ ಪರರ ಕೈಗೆ ಹೋದರೆ ತಿರುಗಿ ಬರುವುದಿಲ್ಲ; ಬಂದರೂ ಉಪಯೋಗವಾಗದೇ ಬರುವುದಿಲ್ಲ', ಎಂದು ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ. ಇವುಗಳಲ್ಲಿ ಮೂರನೆಯ ವಸ್ತುವಿನ ಬಗ್ಗೆ ತಲೆಕೆಡಿಸಿಕೊಳ್ಳುವ ಪ್ರಸಂಗ ನನಗಿನ್ನೂ ಬಂದಿಲ್ಲ. ಉಳಿದೆರಡು ವಸ್ತುಗಳ ವಿಷಯದಲ್ಲಿ ಮಾತ್ರ ಈ ಸಂಸ್ಕೃತ ಸುಭಾಷಿತಕಾರನಷ್ಟು ನಾನು ಸುದೈವಿಯಲ್ಲ. ಅನೇಕರು ನನ್ನಿಂದ ಹಣ ಒಯ್ದಿದ್ದಾರೆ. ಪುಸ್ತಕ ಒಯ್ದಿದ್ದಾರೆ. ಉಪಯೋಗಿಸಲಿಕ್ಕೆಂದೇ ಕೊಟ್ಟದ್ದು. ಅಂದ ಮೇಲೆ ಉಪಯೋಗವಾಗದೇ ತಿರುಗಿ ಬರುವುದಿಲ್ಲ ಎಂದು ಹಾಸ್ಯಮಾಡುವುದಾಗಲಿ, ಚಿಂತೆಗೀಡು ಮಾಡುವುದಾಗಲೀ ಜಾಣತನದ ಕೆಲಸವಲ್ಲ. ನನ್ನ ಸಮಸ್ಯೆಯೆಂದರೆ, ಪರರ ಕೈಗೆ ಹೋದರೂ ವಸ್ತುಗಳು ತಿರುಗಿ ಬರುವುದೇ ಇಲ್ಲ. ಈ ಲೇಖನವನ್ನು ಓದುವ ಎಲ್ಲರೂ ನನ್ನ ಅನುಭವವನ್ನು ಅನುಮೋದಿಸುತ್ತಾರೆಂಬುದರಲ್ಲಿ ನನಗೆ ಸಂದೇಹವೇ ಇಲ್ಲ. ಆದರೆ ಇದರಲ್ಲೊಂದು ಮೋಜಿನ ಸಂಗತಿಯೆಂದರೆ, ನಿಮ್ಮ ಗೆಳೆಯರಿಗೆ ಪುಸ್ತಕ ಕಡಕೊಟ್ಟ ನೀವೂ, ನಿಮಗೆ ಕಡಕೊಟ್ಟ ನಿಮ್ಮ ಗೆಳೆಯರು ಒಂದೇ ಬಗೆಯ ಅನುಭವ ಹೊಂದಿರುವುದು.

VII. ನಿಮಗೆ ಗೊತ್ತಿರುವ ನಾಲ್ಕು ಗಾದೆಗಳನ್ನು ಬರೆಯಿರಿ. (1×4=4)

---